12

# ನಿನ್ನನ್ನು ನೀ ಮರೆತು ಬಿಡು

# (4:8-14)

ನಮ್ಮ ಹಿಂದಿನ ಪಾಠದಲ್ಲಿ "ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ" ಎಂಬ ವಿಷಯದ ಮೇಲೆ ಅಧ್ಯಯನವನ್ನು ಆರಂಭಿಸಿದೆವು. ವಚನಗಳು 1ರಿಂದ 7ವರೆಗೆ, ನಾವು ಈ ಸಲಹೆಗಳನ್ನು ಹೆಕ್ಕಿ ತೆಗೆದುಕೊಂಡಿದ್ದೇವೆ: (1) ಆಶ್ಚರ್ಯಪಡದಿರು, (2) ನಿನ್ನ ಕೈಗಳನ್ನು (ಅಸಹಾಯಕತೆಯಿಂದ) ಚೆಲ್ಲದಿರು, (3) ಮತ್ತು ಸೈತಾನನ ನಿಯಮಗಳೊಂದಿಗೆ ಆಟ ಆಡದಿರು. ವಚನಗಳು 8ರಿಂದ 14ರಲ್ಲಿ, ನ್ಯಾಯ ಮಂಡಳಿಯ ಮುಂದೆ ಪೇತ್ರನು ತನ್ನನ್ನು ಸಮರ್ಥಿಸಿಕೊಳ್ಳುವುದನ್ನು ನಾವು ನೋಡುತ್ತೇವೆ: ಪೇತ್ರನ ಮಾತುಗಳ ಮೂಲಕ ಒಂದು ತತ್ವವು ಹೊಳೆಯುತ್ತದೆ; ಪೇತ್ರನು ಕ್ರಿಸ್ತನ ಬಗೆಗೆ ಮತ್ತು ಆತ್ಮನ ಸುವಾರ್ತೆಯ ಬಗೆಗೆ ಹೆಚ್ಚು ಕಳಕಳಿಯಿಂದ ಇದ್ದನೇ ಹೊರತು ತನ್ನ ವಿಷಯದಲ್ಲಿ ಅಲ್ಲ.

## ಆತ್ಮ

ಪೇತ್ರನು ತನ್ನನ್ನು ಸಮರ್ಥಿಸಿಕೊಳ್ಳುವುದಕ್ಕೆ ಆರಂಭಿಸುತ್ತಿರುವಂತೆ, ಆತನು "ಪರಿಶುದ್ಧಾತ್ಮಭರಿತ" ಇದ್ದನು (ವಚನ 8ಎ). ಯೇಸು ತನ್ನ ಶಿಷ್ಯರಿಗೆ ಸೆರೆಯಲ್ಲಿ ಇಡುವುದರ ಬಗೆಗೆ ಎಚ್ಚರಿಸುತ್ತಾ, "ಏನು ಉತ್ತರ ಕೊಡಬೇಕೆಂಬ ವಿಷಯದಲ್ಲಿ ನಾವು ಮುಂದಾಗಿ ಯೋಚಿಸುವುದಿಲ್ಲವೆಂದು ನಿಮ್ಮ ಮನಸ್ಸಿನಲ್ಲಿ ನಿಶ್ಚಯಮಾಡಿಕೊಳ್ಳಿರಿ, ಯಾಕೆಂದರೆ ನಿಮ್ಮ ವಿರೋಧಿಗಳೆಲ್ಲರೂ ಎದುರು ನಿಲ್ಲುವುದಕ್ಕೂ, ಎದುರು ಮಾತಾನಾಡುವುದಕ್ಕೂ ಆಗದಂಥ ಬುದ್ಧಿಯನ್ನು ನಾನೇ ನಿಮಗೆ ಕೊಡುತ್ತೇನೆ" (ಲೂಕ 21:14, 15)[1] ಎಂದು ಹೇಳಿದನು. ಪೇತ್ರನು ಒಂದು ರಾತ್ರಿ ಸೆರೆಯಲ್ಲಿ ಹೇಗೆ ಕಳೆದನೋ ನಾನರಿಯೆನು.[2] ಆದರೆ ಆತನು ತನ್ನ ಸಮರ್ಥನೆಗಾಗಿ ಚಿಂತಿಸುತ್ತಾ ಆ ರಾತ್ರಿಯನ್ನು *ಕಳೆಯಲಿಲ್ಲ* ಎಂದು ನಾನು ಬಲ್ಲೆನು. "ಪರಿಶುದ್ಧಾತ್ಮಭರಿತನಾಗಿರು" ಇದರ ಅರ್ಥವು ಆತನು ಅತ್ಮದ ನಿಯಂತ್ರಣದೆಡೆಯಲ್ಲಿ ಇದ್ದನು ಎಂಬುದೇ. ಯೇಸುವಿನ ಆತ್ಮವು[3] ಆತನ ಮೂಲಕ ಸನ್ಹೆದ್ರೀನಿನಲ್ಲಿ ಮಾತನಾಡಿತು.

## ವಿಷಯ

ನ್ಯಾಯಮಂಡಳಿಯು ಕೇಳಿದ ಪ್ರಶ್ನೆಯು ("ಯಾವ ಶಕ್ತಿಯಿಂದ ಅಥವಾ ಯಾವ ಹೆಸರಿನಿಂದ ಇದನ್ನು ಮಾಡಿದಿರಿ?") ಅಸ್ಪಷ್ಟವಾಗಿರಬಹುದು, ಆದರೆ ಇದು ಪೇತ್ರನ ವಿಷಯವನ್ನು ಕೈಗೆತ್ತಿಕೊಳ್ಳುವ ಉದ್ದೇಶವನ್ನು ಪರಿಪೂರ್ಣವಾಗಿ ಸ್ಪಷ್ಟಪಡಿಸುವಲ್ಲಿ ಉಪಯುಕ್ತವಾಯಿತು. ಪರಿಶುದ್ಧಾತ್ಮನಿಂದ ಮಾರ್ಗದರ್ಶನವನ್ನು ಪಡೆದು, ಆತನು "ಇದನ್ನು" ಎಂಬ ಪದವನ್ನು ವಾಸಿ ಮಾಡುವುದಕ್ಕೆ ಸೂಚಿಸುವ ವಿವರಣೆಗಳನ್ನು ಕೊಡುತ್ತಾನೆ. "ಜನರ ಅಧಿಕಾರಿಗಳೇ, ಹಿರಿಯರೇ," ಎಂದು ಆರಂಭಿಸಿ "... ಒಬ್ಬ ಅಂಗಹೀನನಿಗೆ[4] ಆದ ಉಪಕಾರದ ವಿಷಯದಲ್ಲಿ ಅವನಿಗೆ ಯಾತರಿಂದ ನೆಟ್ಟಗಾಯಿತು ಎಂಬುದಾಗಿ ಈ ಹೊತ್ತು ವಿಚಾರಣೆ ಮಾಡಲು ..." (ವಚನಗಳು 8ಬಿ, 9). ಪೇತ್ರನು "ಈ ಮನುಷ್ಯನು" ಎಂದು ಹೇಳಿದಾಗ ಆ ಮನುಷ್ಯನು ಅವರ ಸಂಗಡಲೇ ನಿಂತುಕೊಂಡಿದ್ದನು (ವಚನ 14). ಈ ಸ್ಥಿತಿಯ ಹಾಸ್ಯಾಸ್ಪದವಾದದ್ದು! ಪೇತ್ರನು ಇದನ್ನು ಅರಿತಿದ್ದನು. ನ್ಯಾಯಮಂಡಲಿಗೂ ತಿಳಿದಿತ್ತು.

## ರಕ್ಷಕ

ನಂತರ ಅಪೊಸ್ತಲರು ಇದಕ್ಕೆ ಪ್ರತಿಯಾಗಿ "ಒಂದು ವೇಳೆ ಈತನನ್ನು ಸ್ವಸ್ಥಮಾಡಿರುವ ಬಗೆಗೆ ನೀವು *ನಿಜವಾಗಿ* ಆಸಕ್ತಿಯುಳ್ಳವರಾಗಿದ್ದರೆ, ನಾನು ನಿಮಗೆ ಹೇಳುತ್ತೇನೆ" ಅಂದರು. ಅವರು "ಯಾವ *ಹೆಸರಿನಲ್ಲಿ* ನೀವಿದನ್ನು ಮಾಡಿದಿರಿ?" ಎಂದು ಕೇಳಿದರು. ಆಗ ಪೇತ್ರನು ಆ ಮನುಷ್ಯನು *ಯೇಸುವಿನ* ಹೆಸರಿನಲ್ಲಿ ಸ್ವಸ್ಥನಾದನು ಎಂದು ಘೋಷಿಸಿದನು:

> ನಿಮ್ಮೆಲ್ಲರಿಗೂ, ಇಸ್ರಾಯೇಲ್ ಜನರೆಲ್ಲರಿಗೂ[5] ತಿಳಿಯಬೇಕಾದದ್ದೇನಂದರೆ - ನೀವು ಶಿಲುಬೆಗೆ ಹಾಕಿಸಿದಂಥ ಮತ್ತು ದೇವರು ಸತ್ತವರೊಳಗಿಂದ ಎಬ್ಬಿಸಿದಂಥ *ನಜರೇತಿನ ಯೇಸುಕ್ರಿಸ್ತನ ಹೆಸರಿನಿಂದಲೇ* ಈ ಮನುಷ್ಯನು ನಿಮ್ಮೆದುರಿನಲ್ಲಿ ಸ್ವಸ್ಥವಾಗಿ ನಿಂತಿರುತ್ತಾನೆ (ವಚನ 10; ಒತ್ತಿ ಹೇಳಿದ್ದು ನನ್ನದು).

ಪೇತ್ರನು ತನ್ನ ಜೀವನದ ಬಗೆಗೆ ಚಿಂತಿತನಾಗಿರಲಿಲ್ಲ. ನೀವು ಒಂದು ವೇಳೆ ನಿಮ್ಮ ವೈಯಕ್ತಿಕ ರಕ್ಷಣೆಯ ಬಗೆಗೆ ಚಿಂತಿಸುವವರಾಗಿದ್ದರೆ, ನೀವು ನಿಮ್ಮ ಪ್ರಭಲ ಗುಂಪಿನೆಡೆಗೆ ಬೋಟ್ಟು ತೋರಿಸುತ್ತಿರಲಿಲ್ಲ ಮತ್ತು ಮೆಸ್ಸೀಯನನ್ನು ಕ್ರೂಜೆಗೆ ಹಾಕಿದ್ದಕ್ಕೆ ಅವರನ್ನು ಬಯ್ಯುತ್ತಿರಲಿಲ್ಲ! ಪೇತ್ರನು ಯಾವುದರ ಬಗೆಗೆ ಚಿಂತಿತನಾಗಿದ್ದನು? ಕೇವಲ ಯೇಸುವಿನ ಹೆಸರಿಗಾಗಿ ಮಾತ್ರ!

ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ, ಈ ವಿಷಯವನ್ನು ಜ್ಞಾಪಿಸಿಕೊಳ್ಳುವದು ಅವಶ್ಯವಿದೆ: ಅದು ನಿಮಗೆ ಏನು ಸಂಭವಿಸುವದು ಎಂಬುವುದು ಮುಖ್ಯವಲ್ಲ, ಆದರೆ ಕರ್ತನ ನಿಮಿತ್ತ ಏನು ಸಂಭವಿಸುತ್ತದೆ ಎನ್ನುವುದು ಪ್ರಮುಖ್ಯವಾಗಿದೆ![6]

ದೇವರು ಆತನನ್ನು [ಯೇಸುವನ್ನು] ಸತ್ತವರೊಳಗಿಂದ ಎಬ್ಬಿಸಿದನು ಎಂಬ ಪೇತ್ರನ ಧೈರ್ಯದಾಯಕ ಹೇಳಿಕೆಯನ್ನು ಗಮನಿಸಿ. ಅಪೊಸ್ತಲರ "ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು" (ವಚನ 2). ಎಂಬ ಘೋಷಣೆಯ ಈ ಭಾಗವು ಸದ್ದುಕಾಯರನ್ನು ವಿಚಲಿತಗೊಳಿಸಿತು ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಪೇತ್ರನು ವಿವಾದಾಸ್ಪದವಾದ ವಿಷಯಗಳನ್ನು ನಿರ್ಲಕ್ಷಿಸಲಿಲ್ಲ - ಆ ವಿಷಯವಾಗಿ ಆತನ *ಕೇಳುಗರು ಕೇಳಬೇಕೆಂದು ಬಯಸುವವರಾಗಿದ್ದಾರೆ*!

## ಕಲ್ಲು

ಪೇತ್ರನು ತನ್ನ ಆರೋಪಗಳನ್ನು ಇನ್ನೂ ಮುಗಿಸಿರಲಿಲ್ಲ. "ಶಸ್ತ್ರಾಭ್ಯಾಸ ಮಾಡದ ಸಾಧಾರಣರು" ಆದ ಈ ಮೀನುಗಾರರು ದೈವಜ್ಞಾನಿಗಳಂತೆ ದೇವವಾಕ್ಯವನ್ನು ವ್ಯಾಖ್ಯಾನಿಸುವ ಎದೆಗಾರಿಕೆಯನ್ನು ಹೊಂದಿದ್ದರು: "ಮನೆಕಟ್ಟುವವರಾದ ನೀವು ಹೀನೈಸಿದ ಕಲ್ಲು ಆತನು; ಆತನೇ ಮುಖ್ಯವಾದ ಮೂಲೆಗಲ್ಲಾಗಿದ್ದನು" (ವಚನ 11). ಮೆಸ್ಸಿಯನ ಮೊದಲನೆಯ ಆಧಾರಗಳಲ್ಲಿ ಒಂದನ್ನು ಪೇತ್ರನು ಕೀರ್ತನೆ 118:22ರಿಂದ ಉಲ್ಲೇಖಿಸಿದನು.[7] ಪೇತ್ರನು *"ನೀವು"* ಎಂಬ ಪದವನ್ನು ಕೂಡಿಸುವ ಮೂಲಕ ಆ ಪ್ರವಾದನೆಯನ್ನು ವ್ಯಕ್ತಿಗತಮಾಡಿದ್ದಾನೆ: "ಮನೆಕಟ್ಟುವವರಾದ ನೀವು ಹೀನೈಸಿದ ಕಲ್ಲು," "ಮನೆಕಟ್ಟುವವರು" ಎಂಬ ಪದವು ಮೊಳೆ ಹೊಡೆಯುವವರನ್ನು, ಅಥವಾ ಗಾರೆಯನ್ನು ಹರಡುವವರನ್ನು ಸೂಚಿಸುವುದಿಲ್ಲ. ಇದು ಕಟ್ಟಡದ ಉಸ್ತುವಾರಿ ಯಾದವರನ್ನು, ವಾಸ್ತುಶಿಲ್ಪಿಯನ್ನು, ಗುತ್ತಿಗೆ ಹಿಡಿಯುವವರನ್ನೂ, ಮೇಲುಸ್ತುವಾರಿಯನ್ನೂ, ಮತ್ತು ಕೆಲಸಗಾರರ ಮೇಲ್ವಿಚಾರಕರನ್ನೂ ಮೊದಲಾದವರನ್ನು ಸೂಚಿಸುವುದಾಗಿದೆ. ಪೇತ್ರನು ಯೆಹೂದಿ ನೀತಿಯ ವಾಸ್ತುಶಿಲ್ಪಿಯತ್ತ ಬೆರಳು ತೋರಿಸುವವನಾಗಿದ್ದಾನೆ. "ನಿಮ್ಮ *ನಾಯಕರು*" ಎಂದು ಹೇಳುತ್ತಾ, ನೀವು "ನಿರಾಕರಿಸಿದ ಮೆಸ್ಸೀಯನು" ಎಂದು ಹೇಳುತ್ತಾನೆ!

ಅವರು ಮೆಸ್ಸೀಯನನ್ನು ನಿರಾಕರಿಸಿದರು ಯಾಕೆಂದರೆ ಅವರಿಗೆ ತಪ್ಪುಕಲ್ಪನೆಗಳಿದ್ದವು: ಮೆಸ್ಸೀಯನು ವೈಭವವಾಗಿ ಮತ್ತು ಧಾರ್ಮಿಕ ಆಚರಣೆಗಳಿಂದ ಬರುವನು ಮತ್ತು ರೋಮ

ನ್ನರನ್ನು ಈ ನೆಲದಿಂದ ಓಡಿಸಿಬಿಡುವನು ಎಂದು ಅವರು ಭಾವಿಸಿದ್ದರು. ಆತನು ದಾವೀದನ ಕಿರೀಟದಡಿಯಲ್ಲಿ ಯೆರೂಸಲೇಮು ಪಟ್ಟಣವನ್ನು ಆಳುವನು ಮತ್ತು ಆಶೀರ್ವಾದವು ಪಾಲಿಸ್ತಾನ ದೇಶದವರೆಗೂ ಹರಿಯುವದು ಎಂದು ಯೋಚಿಸುವವರಾಗಿದ್ದರು. ಆದರೆ ಯೇಸು ಬಂದಾಗ, ಆತನು ಅವರ ಮೆಸ್ಸೀಯನ ಕಲ್ಪನೆಗಳಿಗೆ ವಿರುದ್ಧವಾಗಿದ್ದನು - ಹೀಗಾಗಿ ಅವರು ಆತನನ್ನು ನಿರಾಕರಿಸಿದರು. ದೈವತ್ವದೆಡೆಯಲ್ಲಿನ ಒಂದು ಮೂಲೆಗಲ್ಲಾಗಿರುವುದನ್ನು ಅವರು ನಿರಾ ಕರಿಸಿದರು!

ಆ ದಿನಗಳಲ್ಲಿ ಮೂಲೆಕಲ್ಲು ಕಟ್ಟಡದ ನಿರ್ಮಾಣದಲ್ಲಿ ಪ್ರಮುಖವಾದ ಭಾಗವಾಗಿತ್ತು. ಇದು ಕಟ್ಟಡಕ್ಕೆ ಅತ್ಯವಶ್ಯವಾದದ್ದೂ ಆಗಿತ್ತು. ಇದು ಅಸ್ತಿವಾರವನ್ನು ಸಂಪೂರ್ಣಗೊಳಿಸುತ್ತಿತ್ತು ಮತ್ತು ಗುಣಮಟ್ಟ ಹಾಗೂ ಕಟ್ಟಡದ ವಿನ್ಯಾಸದ ಬೆನ್ನೆಲುಬು[8] ಆಗಿತ್ತು. ಯೆಹೂದಿಗಳು ಮೂಲೆಕಲ್ಲಿಗಾಗಿ ಸ್ಥಳವನ್ನು ಉಳಿಸುತ್ತಿದ್ದರು. (ಮೆಸ್ಸೀಯನು ಏನಾಗಿರಬಹುದು ಎಂಬುದನ್ನು ಆಧರಿಸಿ); ಆದರೆ ಯೇಸು ಬಂದಾಗ, ಆತನು ಆ ಆರಂಭಕ್ಕೆ ಹೊಂದಿಕೆ ಆಗಲಿಲ್ಲ! ಗರ್ವ ಮತ್ತು ಪೂರ್ವಾಗ್ರಹ ಪೀಡಿತ ಯೋಚನೆಗಳು ಸತ್ಯಾಂಶಕ್ಕೆ ಪ್ರಭಲವಾದ ವಿರೋಧಿಗಳಾಗಿವೆ!

## ರಕ್ಷಣೆ

ಪೇತ್ರನು ನ್ಯಾಯಮಂಡಳಿಯ ಒಡೆಯುವಷ್ಟು ಸರಣೀಯ ಏಟುಗಳನ್ನು ಕೊಟ್ಟನು. ಆತನು ಕೊಟ್ಟ ಬಲವಾದ ಏಟು: "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಗುವುದಿಲ್ಲ" (ವಚನ 12). ಗ್ರೀಕ್ ಭಾಷೆಯಲ್ಲಿ ಪದಗಳ ಜೊತೆಗೆ ಆಟವಾಡಿದಂತೆ ಇಂಗ್ಲೀಷ ಭಾಷೆಯಲ್ಲಿ ಅದನ್ನು ಅಭಿವ್ಯಕ್ತಿಗೊಳಿಲಾಗುವುದು ವಚನ 12ರಲ್ಲಿ "ರಕ್ಷಣೆ" ಮತ್ತು "ರಕ್ಷಿಸು" ಇವು ಒಂದೆ ಪದದ ಮೂಲವಾಗಿದ್ದು 9ನೆಯ ವಚನದಲ್ಲಿ "ಸರಿಯಾಗಿ ಮಾಡು" ಎಂಬ ಪದಕ್ಕೆ ಸಮಾನವಾಗಿದೆ. ಯಾರು ಭಿಕ್ಷುಕನನ್ನು ದೈಹಿಕವಾಗಿ ಸ್ವಸ್ಥಮಾಡಿದರೋ ಆತನೇ ಮನುಕುಲದ ಆತ್ಮವನ್ನು ಸ್ವಸ್ಥಮಾಡಿದನು![9]

"ಅಲ್ಲದೆ, ರಕ್ಷಣೆಯು *ಬೇರೆ ಯಾರಿಂದಲೂ ಸಾಧ್ಯವಿಲ್ಲ*"? ಈ ಹೇಳಿಕೆಯು ಸಂಕುಚಿತ ಮನೋಭಾವನೆಯ ಮಾತು ಎನಿಸಿದರೂ ಅದು ನಿಜವಾಗಿದೆ. ಯೇಸು ಹೇಳಿದ ಈ ಮಾತು: "ನಾನೇ ಮಾರ್ಗವು, ಸತ್ಯವೂ *ಜೀವವೂ ಆಗಿದ್ದೇನೆ.* ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ"[10] (ಯೋಹಾನ 14:6; ಒತ್ತಿ ಹೇಳಿದ್ದು ನನ್ನದು) ಪೇತ್ರನು ಈ ವಿಚಾರವನ್ನು ಪ್ರತಿಧ್ವನಿಸಿದನು. ಆತನ ಕೇಳುಗರು ತಾವು ಅಬ್ರಹಾಮನ ಸಂತತಿಯವರಾಗಿದ್ದ ಮತ್ತು ಅವರು ಮೋಶೆಯ ಧರ್ಮಶಾಸ್ತ್ರವನ್ನು ಹೊಂದಿರುವ ಕಾರಣದಿಂದಲೇ ತಮ್ಮನ್ನು ತಾವೇ ರಕ್ಷಿಸಲ್ಪಟ್ಟರು ಎಂದುಕೊಳ್ಳುತ್ತಿದ್ದರು. ಹೀಗಿದ್ದಾಗ ಪೇತ್ರನು ಸಂಕ್ಷೀಪ್ತವಾಗಿ "ನೀನು ಅಬ್ರಹಾಮನ ಮತ್ತು ಮೋಶೆಯ ಮೂಲಕ ರಕ್ಷಣೆಯನ್ನು ಹೊಂದಲಾರೆ!" ಎಂದು ಹೇಳಿದನು. ಯೇಸುಕ್ರಿಸ್ತನ ಹೆಸರಿನ ಮೂಲಕವೇ ನೀನು ರಕ್ಷಿಸಲ್ಪಡುತ್ತೀ ಎಂದು ಹೇಳಿದನು. ಇಂದಿನ ಧಾರ್ಮಿಕ ಜಗತ್ತು ನೀನು ಒಳ್ಳೆಯವನಾಗಿದ್ದರೆ ನೀನು ಪರಲೋಕಕ್ಕೆ ಹೋಗಲು ಸಾವಿರಾರು ಮಾರ್ಗಗಳಿವೆ ಯೆಂದು ಹೇಳಬಹುದು ಆದರೆ ಪೇತ್ರನು ಮತ್ತೆ "ಇಲ್ಲ ನೀನು ಯೇಸುವಿನ ಹೆಸರಿನ ಮೂಲಕ ಮಾತ್ರವೇ ರಕ್ಷಿಸಲ್ಪಡುತ್ತಿ ಎಂದು ಹೇಳುತ್ತಾನೆ!" ಸತ್ಯವು ಸ್ವಭಾವದಿಂದಲೇ ಸಂಕುಚಿತ ವಾಗಿದೆ.[11]

"ನಾವು" ಎಂಬ ಪದವನ್ನು ಗಮನಿಸಿರಿ: "*ನಾವು* ಯಾವುದರ ಮೂಲಕ ರಕ್ಷಿಸಲ್ಪಡಬಹುದು" ಬಹುಶಃ ಪೇತ್ರನು ತನ್ನ ಕೈಗಳನ್ನು ಚಾಚಿ ತನ್ನನ್ನು ಒಳಗೊಂಡು ಯೋಹಾನ ಮತ್ತು ವಾಸಿಯಾದ ಮನುಷ್ಯನನ್ನು ನ್ಯಾಯಮಂಡಳಿಯನ್ನು ಮತ್ತು ಅಲ್ಲಿರುವ ಎಲ್ಲ ಇತರರನ್ನು ತನ್ನೊಡನೆ ಸೇರಿಸಿಕೊಳ್ಳುತ್ತಾನೆ "ನಮ್ಮಲ್ಲಿ ಯಾರಾದರೂ ಮೀನುಗಾರರು, ಭಿಕ್ಷುಕರು, ಯಾಜಕರು, ಹಿರಿಯರು, ಶಾಸ್ತ್ರಿಗಳು, ಅಂಗಳದ ಅಧಿಕಾರಿಗಳು, ಅಥವಾ ಯಾರೇ

ಇರಲಿ - ಅವರು ರಕ್ಷಿಸಲ್ಪಡಬೇಕಾದರೆ" "ಯೇಸುಕ್ರಿಸ್ತನ ಮೂಲಕವೇ ಆಗುತ್ತದೆ" ಎಂದು ಆತನು ಒತ್ತಿ ಹೇಳುತ್ತಾನೆ!

ಧಾರ್ಮಿಕ ಕೇಳುಗರು ಕಳೆದು ಹೋಗಿದ್ದಾರೆ ಎಂದು ಪೇತ್ರನು ಹೇಳುತ್ತಾನೆ. ದೇವರು ಈ ಗುಂಪಿಗೆ ಇನ್ನೊಂದು ಅವಕಾಶವನ್ನು ಕೊಟ್ಟಿದ್ದನು ಎಂದು ಪೇತ್ರನು ಹೇಳುತ್ತಾನೆ. ಕುಂಟನು ದೈಹಿಕವಾಗಿ ವಾಸಿಯಾದಂತೆ, ನ್ಯಾಯಮಂಡಳಿಯ ಸದಸ್ಯರು, ಆತ್ಮೀಕವಾಗಿ ರಕ್ಷಿಸಲ್ಪಡಬಹುದಿತ್ತು. ಇನ್ನೂ ತಡವಾಗಲಿಲ್ಲ, ನಿರಾಕರಿಸುವದು ಮತ್ತು ಯೇಸುವನ್ನು ಶಿಲುಬೆಗೆ ಹಾಕುವದು "ಕ್ಷಮಿಸಲಾಗದ ಪಾಪ" ಆಗಿರಲಿಲ್ಲ ಒಂದು ವೇಳೆ ಅವರು ಈಗಲೂ ಆತನನ್ನು ಮೆಸ್ಸೀಯನು ಎಂದು ಒಪ್ಪಿಕೊಂಡಿದ್ದಾದರೆ, ಅವರು ಇನ್ನೂ ರಕ್ಷಿಸಲ್ಪಡಬಹುದಾಗಿದೆ! ದೇವರು ಕೃಪೆಯುಳ್ಳ ದೇವರಾಗಿದ್ದಾನೆ.

## ಶಾಂತತೆ

ಪೇತ್ರನ ಮಾತುಗಳು ಸಭೆಯನ್ನು ಮಾತಿಲ್ಲದಂತೆ ಮಾಡಿತು. "ಪೇತ್ರ ಮತ್ತು ಯೋಹಾನರು [ಧೈರ್ಯದಿಂದ KJVಯಲ್ಲಿ "ದೈರ್ಯ," NIVಯಲ್ಲಿ "ನಿರ್ಭೀತಿ"][12] ಮಾತನಾಡುವುದನ್ನು ನೋಡಿ "ಶಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು" (ವಚನಗಳು 13ಎ). "ಶಸ್ತ್ರಾಭ್ಯಾಸಮಾಡದ ಸಾಧಾರಣರು" ಎಂದರೆ ಅಪೊಸ್ತಲರು ಯಾವುದೇ *ಔಪಚಾರಿಕ* ತರಬೇತಿಯನ್ನು ಪಡದಿರಲಿಲ್ಲ (ನಿರ್ಧಿಷ್ಟವಾಗಿ ರಬ್ಬಿಯ ತರಬೇತಿ) ಮತ್ತು ಔಪಚಾರಿಕ ವಾಗಿ ಸ್ಥಾನಮಾನಗಳನ್ನು ಹೊಂದಿರಲಿಲ್ಲ.[13] ಗುರುತಿಸಲ್ಪಟ್ಟ ಧಾರ್ಮಿಕ ವಲಯಗಳಲ್ಲಿ ಪೇತ್ರ ಮತ್ತು ಯೋಹಾನರು ಏನೂ ಆಗಿರಲಿಲ್ಲ! ಹೀಗಿದ್ದಾಗ ಅವರು ಇಂಥ ಅಧಿಕಾರದಿಂದ ಮತ್ತು ಧೃಢನಂಬಿಕೆಯಿಂದ ಹೇಗೆ ಮಾತನಾಡಲು ಸಾಧ್ಯವಾಯಿತು? ಎಪ್ಪತ್ತೊಂದು ಜನ ಪಂಡಿತರು ಏನನ್ನೂ ಹೇಳದೇ ಅವರನ್ನು ಹೇಗೆ ಬಿಟ್ಟರು? ಈ ಉತ್ತರವು ನ್ಯಾಯಮಂಡಳಿಗೆ ಬಂತು: "ಇವರು ಯೇಸುವಿನ ಸಂಗಡ ಇದ್ದವರು ಎಂದು ಗುರುತುಹಿಡಿದರು" (ವಚನ 13ಬಿ). ಅಲ್ಲಿಯ ವರೆಗೆ ಅವರಿಗೆ ಪೇತ್ರ ಯೋಹಾನರ ಬಗ್ಗೆ ತಿಳಿದಿರಲಿಲ್ಲ[14] ಎಂಬರ್ಥದ ಮಾತುಗಳನ್ನು ಇದು ಕೊಡುವುದಿಲ್ಲ ಅಥವಾ ಈ ಜನರು ಯೇಸುವಿನ ಶಿಷ್ಯರಾಗಿದ್ದರು ಎಂದು ನ್ಯಾಯಮಂಡಳಿಯು ಮೊದಲ ಬಾರಿಗೆ ಅರಿತುಕೊಂಡಿತು ಎಂದೂ ಇದು ಸೂಚಿಸುವುದಿಲ್ಲ. ಬದಲಾಗಿ ನ್ಯಾಯಮಂಡಳಿಯು ಪೇತ್ರ ಮತ್ತು ಯೋಹಾನರು ಹೇಗೆ ಧೈರ್ಯದಿಂದ ಮತ್ತು ನಿರ್ಣಾನಾತ್ಮಕ ವಾಗಿ ಮಾತನಾಡಲು ಸಮರ್ಥರಾದರು ಎಂಬುದಕ್ಕೆ ಆಶ್ಚರ್ಯಟ್ಟರು. ಆ ಇಬ್ಬರು ಮನುಷ್ಯರು ಆ ರೀತಿಯಲ್ಲಿ ಮಾತನಾಡಿದರು ಯಾಕೆಂದರೆ ಅವರು "*ಯೇಸುವಿನೊಂದಿಗೆ* ಇದ್ದರು"! "ಯೇಸುವಿನೊಂದಿಗೆ ಇರುವುದರ ಮೂಲಕ [ಈ ಮನುಷ್ಯರಿಗೆ] ಏನು ಮಾಡಲು ಸಾಧ್ಯ!" ಎಂಬುದನ್ನು ನ್ಯಾಯಮಂಡಳಿಯು ಕಂಡಿತು! (ಸಜೀವ ಬೈಬಲ್) ಹಿಂದೆ ಯೇಸುವಿನೊಂದಿಗೆ ಆದ ವಾಗ್ವದವು ನ್ಯಾಯ ಮಂಡಳಿಯ ಸದಸ್ಯರ ಸ್ಮರಣೆಗೆ ತರುವಂತಹ ನೆನಪುಗಳೇ ಆಗಿವೆಯೇ ಹೊರತು ಬೇರೇನೂ ಅಲ್ಲ! ಯೇಸುವಿಗೂ ಸಹಿತ ಔಪಚಾರಿಕ ತರಬೇತಿಯ ಕೊರತೆಯಿತ್ತು (ಗಮನಿಸಿ ಯೋಹಾನ 7:15). ಹೀಗಿದ್ದಾಗ್ಯೂ ಅವರು ಪ್ರತಿಸಾರಿ ಆತನನ್ನು ದೈವಿಕ ಶಾಸ್ತ್ರದ ಯುದ್ಧದಲ್ಲಿ ತೊಡಗಿಸುತ್ತಿದ್ದರು ಮತ್ತು ಅವರು ಸೋಲುತ್ತಿದ್ದರು[15] ಈ ಅವಮಾನಕರ ಸಮಯಗಳು ಅವರ ಸ್ಮರಣೆಯಲ್ಲಿ ಇದ್ದವು ಎಂದು ಯೋಚಿಸಿದ್ದರು. ಆದರೆ ಒಂದಲ್ಲ ಅನೇಕ ಸಾರಿ ಅವರು ಯೇಸುವಿನಿಂದ ಕಟ್ಟಲ್ಪಟ್ಟವರಾಗಿದ್ದರು. ಅವರಿಗೆ ಅದೆಂಥ ಅವಮಾನಕರ ಸಂಗತಿಯಾಗಿತ್ತು.

ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ ನಾವು ಕ್ರಿಸ್ತನೊಡನೆ ಇದ್ದೇವೋ ಇಲ್ಲವೋ ಎಂಬುದು ಒಡನೆಯೇ ಸಾಭೀತಾಗುತ್ತದೆ. ನಮ್ಮೆಲ್ಲರ ವಿಚಾರಗಳು ಸ್ವಕೇಂದ್ರೀ ಕೃತವಾಗಿದ್ದರೆ "ತನ್ನನ್ನು ಬರಿದುಮಾಡಿಕೊಂಡವನ ಹಾಗೂ ತನ್ನನ್ನು ತಾನೇ ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರು ಹೊಂದುವಷ್ಟ ವಿಧೇಯನಾಗುವವನು"

ಆತ್ಮವನ್ನು ನಾವು ಗ್ರಹಿಸಿಕೊಳ್ಳಲಾರದೆ ಹೋದವರಂತಾಗುತ್ತಿದ್ದೆವು (ಫಿಲಿಪ್ಪಿ 2:7, 8) ಎಂಬ ಭಯವು ನಮ್ಮ ಮನದಲ್ಲಿ ತುಂಬಿದಾದ್ದಾರೆ, ಯೇಸು ಕಲಿಸಿದ "ನಿಮ್ಮ ಹೃದಯವು ಕಳವಳಗೊಳ್ಳದೇ ಇರಲಿ; ದೇವರನ್ನು ನಂಬಿರಿ; ನನ್ನನ್ನೂ ನಂಬಿರಿ" (ಯೋಹಾನ 14:1, 2) ಎಂಬ ಸತ್ಯಾಂಶವನ್ನು ನಾವು ಕಲಿತಿಲ್ಲ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಪೇತ್ರ ಮತ್ತು ಯೋಹಾನರಂತೆ ಅದ್ಭುತೀಯ ಆತ್ಮೀಯ ಪ್ರಕಟಣೆಗಳಿಂದ "ತುಂಬಿದವರಾಗಿರದೇ" ಇರಬಹುದು. ಆದರೆ ದೇವರ ಆತ್ಮವು ನಮಗೆ ಸಹಾಯಿಸಲು[16] ನಮ್ಮ ಜೊತೆಯಲ್ಲಿರುವುದರ ಬಗೆಗೆ ನಾವು ಎಚ್ಚರದಿಂದಿರುವುದೇ ಆದರೆ, ಮತ್ತು ಅಪೊಸ್ತಲರಂತೆ ನಾವು ಕ್ರಿಸ್ತನಿಗೆ ಒಪ್ಪಿಸಲ್ಪಟ್ಟವರಾಗಿದ್ದೇ ಆಗಿದ್ದರೆ ಆಗ, ನಾವು ಸಹ ಸೈತಾನನ ಆಕ್ರಮಣವನ್ನು ಧೈರ್ಯದಿಂದ ಸ್ಥೈರ್ಯದಿಂದ ಎದುರಿಸಬಹುದು (ಯಾಕೋಬ 4:7).

ಪೇತ್ರನು ಮಾತನ್ನು ಮುಗಿಸಿದ ನಂತರ, ಅಲ್ಲೊಂದು ನೋವುಯುಕ್ತವಾದ ಪೂರ್ಣವಿರಾಮವು ಇತ್ತು, "ಮತ್ತು ಕ್ಷೇಮ ಹೊಂದಿದ ಮನುಷ್ಯನು ಅವರ ಕೂಡ ನಿಂತಿರುವುದನ್ನು ನೋಡಿ ಪ್ರತಿಯಾಗಿ ಏನೂ ಹೇಳಲಾರದೇ ಇದ್ದರು" (ವಚನ 14). ಅದ್ಭುತವು ಅಲ್ಲಿ ಜರುಗಿತು ಎಂದು ಅವರು ಅರಿತಿದ್ದರು (ವಚನ 16). ಆ ಪ್ರದರ್ಶನದ ಜೊತೆ ಅವರ ಮುಂದೆ ನಿಂತುಕೊಂಡಾಗ "ಅವರು ಏನೂ ಮಾತಲಾಡಲಾರದೆ ಹೋದರು" (NIV).

ವಾಸ್ತವವಾಗಿ "ಅವರಿಗೆ ಉತ್ತರವಾಗಿ ಏನೂ ಹೇಳಲಾಗಲಿಲ್ಲ" ಎಂಬ ಸಂಗತಿಯು ಪುನರುತ್ಥಾನದ ನೈಜತೆಯ ಶಕ್ತಿಯುತವಾದ ಸಾಕ್ಷಿಯಾಗಿದೆ. ವಚನ 10ರಲ್ಲಿ ಪೇತ್ರನ ವಾಗ್ದನದ ಪ್ರಮುಖ ತಳಹದಿಯನ್ನು ನೋಡಿರಿ: (1) ನ್ಯಾಯಮಂಡಳಿಯಲ್ಲಿದ್ದವರು ಯೇಸುವನ್ನು ಕ್ರೂಜೆಗೆ ಹಾಕಿದರು; (2) ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸದನು; (3) ಪುನರುತ್ಥಾನ ಹೊಂದಿದ ಯೇಸುವು ವಾಸಿಮಾಡಿದಂಥ ಆ ಮನುಷ್ಯನು, ಅವರ ಮುಂದೆ ನಿಂತುಕೊಂಡಿದ್ದನು. ನ್ಯಾಯಸಭೆಯ ಸದಸ್ಯರು ಯೇಸುವಿನ ಕ್ರೂಜಿತದಲ್ಲಿ ತಮ್ಮ ಪಾತ್ರವಿದೆ ಎಂಬುದನ್ನು ನಿರಾಕರಿಸಲಾರರು. ಅಲ್ಲದೇ ಆ ಮನುಷ್ಯನೂ ಸ್ವಸ್ಥಹೊಂದಿದ್ದನ್ನೂ ಕೂಡಾ ನಿರಾಕರಿಸಲಾರದೆ ಹೋದರು ಆದ್ದರಿಂದ ಯೇಸುವನ್ನು ಮರಣದಿಂದ ಎಬ್ಬಿಸಿದ್ದನ್ನು ಅವರು ನಿರಾಕರಿಸಲಾಗದೇ ಹೋದರು!

ಕ್ರೈಸ್ತ ಚಳುವಳಿಯು ಇನ್ನೂ ದೀನಾವಸ್ಥೆಯಲ್ಲಿಯೇ ಇತ್ತು. ಅದನ್ನು ನಾಶಮಾಡಲು ಈ ವೈರಿಗಳು ಯೇಸು ಮರಣದಿಂದ ಎಳಲಿಲ್ಲ ಎಂದು ಸಾಧಿಸಲು ಪ್ರಯತ್ನಿಸಿದ್ದಾರೆ. ಅವರು ಕೇವಲ ಯೇಸುವಿನ ದೇಹವನ್ನು ತೋರಿಸಬಹುದು, ಅಥವಾ ಕೇವಲ ಯೇಸುವಿನ ದೇಹಕ್ಕೆ ಏನು ಸಂಭವಿಸಿತು[17] ಎಂಬುದಕ್ಕೆ ಯೋಗ್ಯ ವಿವರಣೆಯನ್ನು ಕೊಡಬಹುದು. ಆದರೆ ಅವೆರಡನ್ನೂ ಮಾಡಲು ಅವರಿಗೆ ಆಗಲಿಲ್ಲ. ಈ ದಿನ ಕೆಲವರು ಇನ್ನೂ ಪುನರುತ್ಥಾನವು ಇಲ್ಲವೆಂದು ಸಾಬೀತು ಪಡಿಸಲು ಪ್ರಯತ್ನಿಸುತ್ತಾರೆ ಇದು ಒಂದು ವೇಳೆ ಹೀಗೆ ಆಗಬೇಕಾಗಿದ್ದರೆ ಪುನರುತ್ಥಾನವು ಮೊದಲು ಘೋಷಿಸಲ್ಪಟ್ಟ ಸಮಯದ ಸ್ಥಳದಲ್ಲಿ ಇದ್ದ ಅಪನಂಬಿಗಸ್ತರಿಂದ ಇದು ಸಾಧ್ಯವಾಗಬಹುದಿತ್ತು ಹೀಗೇನೋ ಅವರಿಗೆ ಏನನ್ನು ಹೇಳಲಿಕ್ಕೆ ಆಗಲಿಲ್ಲ.

## ಮುಕ್ತಾಯ

ಸಮಾರೋಪ ವಚನ 8ರಿಂದ 14ರಲ್ಲಿನ ಪೇತ್ರನ ಸಮರ್ಥನೆಯ ಆರಂಭದಲ್ಲಿ ಆತನು ಕ್ರಿಸ್ತನು ಏನು *ಹೇಳಿದನು* ಹೇಗೆ ನಡೆದುಕೊಂಡನು ಎಂಬುದರಲ್ಲಿ ತಾನು ಹೇಳಿದನ್ನು ಉನ್ನತೀಕರಿಸುತ್ತಾನೆ. ಸೈತಾನನು ಕಷ್ಟದ ಸಮಯವನ್ನು ಕೊಟ್ಟಾಗ ಅದನ್ನನುಸರಿಸಿ ಒಳ್ಳೆಯದನ್ನು ಆಲೋಚನೆ ಮಾಡಲು ನಮಗೆ ಆಗದು.

## ದೃಶ್ಯ ಸಂಬಂಧವಾದ – ಟಿಪ್ಪಣಿ

ಮುಖ್ಯ ಮೂಲೆಗಲ್ಲಿನಂತಿದ್ದ ಯೇಸುವಿನ ನಿರಾಕರಣೆಯ ದೃಷ್ಟಾಂತವು ಮೂಲೆಗಲ್ಲನ್ನು ಇಡುವ ಸ್ಥಳವನ್ನು ಒಳಗೊಂಡು ಒಂದು ಕಟ್ಟಡದ ಚಿತ್ರದ ವಿನ್ಯಾಸದಲ್ಲಿ, ಯೇಸು ಹೇಳಿದ ಮೂಲೆಯಲ್ಲಿ ಬಿಡಲ್ಪಟ್ಟ ಮೂಲೆಗಲ್ಲಿನ ದೃಷ್ಟಾಂತವನ್ನು ಉದಾಹರಿಸಬಹುದು. ಮೆಸ್ಸೀಯನ ಬಗೆಗೆ ಯೆಹೂದಿಗಳ ತಪ್ಪಾಭಿಪ್ರಾಯವನ್ನು ಇದು ಪ್ರತಿನಿಧಿಸುತ್ತದೆ. ಸಾಮಾನ್ಯವಾಗಿ ರೂಢಿಯಾದ ಒಂದು ಮೂಲೆಗಲ್ಲನ್ನು ಒಂದೆಡೆ ಚಿತ್ರಿಸಿರಿ. ಈ ಕಲ್ಲು ಯೇಸುವನ್ನು ಪ್ರತಿನಿಧಿಸುತ್ತದೆ. ಆ ಕಲ್ಲು ಆ ಸ್ಥಳದಲ್ಲಿ ಹೊಂದಿಕೊಳ್ಳದಿರುವುದನ್ನು ಗಮನಿಸಿರಿ. ಹೀಗೆ ಅದು ನಿರಾಕರಿಸಲ್ಪಟ್ಟಿತು. (ಇನ್ನೊಂದು ರೀತಿಯು ದೃಷ್ಟಾಂತವು ಹಳೆಯ ಗಾದೆಯ ಉಪಯೋಗಕ್ಕೆ ಬರುವುದನ್ನು ಇದು ಸೂಚಿಸುವುದಾಗಿದೆ. "ಚೌಕಾಕಾರವಾಗಿರುವ ಗೂಟವನ್ನು ವೃತ್ತಾಕಾರದ ತೂತಿನನಲ್ಲಿ ನೀನು ತೂರಿಸಲಾರಿ" ಹಾಗೆ ಮಾಡಬೇಕಾದರೆ ಚೌಕದ ಗೂಟದ ಮೇಲೆ ವೃತ್ತಾಕಾರದ ತೂತಿನ ಸುತ್ತಲೂ ಕಟ್ಟಿಗೆಯ ತುಂಡಿನಿಂದ ಕೊರೆಯಿರಿ. ಚೌಕದ ಗೂಟದಲ್ಲಿ ಅದೇ ರೀತಿಯ ವೃತ್ತದ ವ್ಯಾಸದಂತಿದೆ. ಈ ವೃತ್ತಾಕಾರದ ಗುಳಿಯು ಯೆಹೂದಿಗಳ ಮೆಸ್ಸೀಯನ ಬಗೆಗಿನ ತಪ್ಪಾಭಿಪ್ರಾಯವನ್ನು ಸೂಚಿಸುತ್ತದೆ ಚೌಕಾಕಾರದ ಗೂಟವು ಯೇಸುವನ್ನು ಪ್ರತಿನಿಧಿಸುತ್ತದೆ.)

---

ಟಿಪ್ಪಣಿಗಳು

[1]ಲೂಕ 12:11, 12; ಮತ್ತಾಯ 10:17-20ಸಹ ನೋಡಿರಿ. ಇದು ಅಪೊಸ್ತಲರಿಗಾದ ವಾಗ್ದಾನವಾಗಿದೆಯೇ ಹೊರತಾಗಿ ಎಲ್ಲ ಬೋಧಕರಿಗಲ್ಲ ಎಂಬುದನ್ನು ಗಮನಿಸಿರಿ. ನೀನು ಮತ್ತು ನಾನು "ಮೊತ್ತ ಮೊದಲೇ ಸಿದ್ಧರಾಗಿರಬೇಕು." [2]ಪೇತ್ರ ಮತ್ತು ಯೋಹಾನರು ಪೌಲ ಮತ್ತು ಸೀಲರಂತೆ ಪ್ರಾರ್ಥಿಸುತ್ತಾ ಹಾಡುತ್ತಾ ದೇವರನ್ನು ಕೊಂಡಾಡುತ್ತಾ ರಾತ್ರಿಯನ್ನು ಕಳೆದಿರಬಹುದು (16:25). [3]ನೋಡಿರಿ 16:7. ಇದು ಪರಿಶುದ್ಧತ್ಮನೊಡನೆ ಮಾತನಾಡುವದು ಇನ್ನೊಂದು ರೀತಿಯಾಗಿದೆ. [4]NIVಯಲ್ಲಿ "ಕುಂಟನ ಮೇಲೆ ತೋರಿದ ಕರುಣೆಯ ಕ್ರಿಯೆಯಂತಿದೆ"! ಎಂದಿದೆ. [5]ಅದರ ಕ್ಲುಪ್ತವಾಗಿ "ನಾನು ನನ್ನನ್ನು ತಿಳಿಯಬೇಕಿದೆ!" ಎಂದು ಹೇಳಿದನು. [6]ಸಾಂಧರ್ಭಿಕವಾಗಿ, ನಮ್ಮ ಆಸಕ್ತಿ ಮತ್ತು ರಾಜ್ಯ (ದೇವರು ರಾಜ್ಯ) ಆಸಕ್ತಿಯು ಒಂದಕ್ಕೊಂದು ಜೊತೆಯಾಗಿದೆ. ನಮಗೇನು ಸಂಭವಿಸುತ್ತದೋ ಅದರ ಬಗೆಗೆ ಹೆಚ್ಚಾಗಿ ಸಂಬಂಧಿಸಿದ್ದಲ್ಲವಾದರೂ ತಪ್ಪು ಆಪಾದನೆಗಳು ನಮ್ಮ ವಿರುದ್ಧವಾಗಿದ್ದರೆ, ಯೇಸುವಿನ ಹೆಸರಿನ ಮೇಲೆ ಕೆಟ್ಟಪರಿಣಾಮವನ್ನು ಪ್ರತಿಬಿಂಬಿಸುವುದಾಗಿದೆ. [7]ಮಾರ್ಕ 12:10ರಲ್ಲಿನ ಪರಿಚ್ಛೇದವನ್ನು ಯೇಸುವು ತನಗೆ ಅನ್ವಯಿಸಿಕೊಂಡನು, ಮೂಲ ಸಂದರ್ಭದಲ್ಲಿಸ ಬೇಡವೆಂದು ಕಲ್ಲು. ಇದು ಇಸ್ರಾಯೇಲು ಇತರ ರಾಷ್ಟ್ರಗಳಿಂದ ನಿರಾಕರಿಸಲ್ಪಟ್ಟದ್ದನ್ನು ಸೂಚಿಸಿದ್ದಾಗಿದೆ. ಆದರೆ ದೇವರಿಂದ ಬಳಸಲ್ಪಟ್ಟಿದೆ. ಈ ರೀತಿಯಂತೆ ಇಸ್ರಾಯೇಲು ದೇವರ ಉದ್ದೇಶವನ್ನು ಸಂಪೂರ್ಣವಾಗಿಸಲಿಲ್ಲ. ಆದರೆ, ಉದ್ದೇಶಿತ ಫನಗಳನ್ನು ತರುವಂತದ್ದು. ಮೆಸ್ಸೀಯನ ಮೇಲೆ ಬಿಟ್ಟದ್ದಾಗಿದೆ. ಸಂಪೂರ್ಣಾರ್ಥದ ನಂತರ, ಪರಿಚ್ಛೇದವು ಮೆಸ್ಸೀಯರ ಪ್ರವಾದನೆಯಂತೆ ಇದದ್ದಾಗಿಯೂ ಇರುವುದಾಗಿಯೂ ಗುರಿತಿಸಲ್ಪಡುತ್ತದೆ. [8]ಇಂದು ನಾವು ಹೊಂದಿದ ತಾಂತ್ರಿಕ ಸಾಧನೆಗಳು ಅಂದು ಅವರಿಗಿರಲಿಲ್ಲ. ಇಂದು ನಾವು ಕಟ್ಟಡ ಕಟ್ಟುವ ರೀತಿಯು, ಮೂಲೆಗಲ್ಲು (ಅಥವಾ ಇಟ್ಟಿಗೆ ಅಥವಾ ಕಟ್ಟಿಗೆ ತುಂಡು) ಅಂದಿನಂತೆ ಇಂದು ಅವಶ್ಯವಿಲ್ಲ, ಹೀಗಾಗಿ ಆಗಿನದಂತೆ ಈ ದಿನಗಳಲ್ಲಿ ಅದೆ ರೀತಿಯ ಬೆಳಕನ್ನು ಬೀರಲು ಸಾಧ್ಯವಿಲ್ಲ. ಆದ್ದರಿಂದ, ಕೆಲ ಭಾಷಾಂತರಗಳು (NIV ಯಂತವುಗಳು) "ಮೂಲೆಕಲ್ಲು" ಎಂದು ಹೊಂದಿವೆ ಅಥವಾ ಈ ವಿವರಣಕ್ಕೆ ಸಮಾನವಾಗಿದೆ. [9]ಬೋಧನಾ ಟಿಪ್ಪಣೆಗಳನ್ನು ಅನುಸರಿಸುವಾಗ, ನಾನು ಪ್ರಮುಖವಾಗಿ, ಈ ಪದಗಳನ್ನು ಧಾರ್ಮಿಕ ಪದಗಳನ್ನಾಗಿ ಯೇಚಿಸುವ, ನಾವು ರಕ್ಷಿಸಲ್ಪಡುವ ಇನ್ನಿತರ ಮಾರ್ಗವಾಗಿ ಅನ್ವಯಿಸಿಕೊಳ್ಳುತ್ತೇನೆ. ಹೇಗೋ, ರಿಚರ್ಡ್ಸ್ ರೋಗರ್ಸ್‌ರವರು ಈ ಮಾತಗಳನ್ನು ಯೋಗ್ಯವಾಗಿ ಸಭೆಗೆ ಬಳಸಿದ್ದಾಗಿದೆ ಎಂದು ಸೂಚಿಸ ರಿಚರ್ಡ್ಸ್ ರೋಗರ್ಸ್‌ರಿಂದ ಮೊದಲ ವಿರೋಧ ಎಂಬ ಪುಸ್ತಕದಿಂದ ಪಡೆದವುಗಳಾಗಿವೆ. Sermon preached at the Sunset church of Christ, Lubbock, Texas, n.d. ಒಂದು ವೇಳೆ ನಾವು ಜಾಗರೂಕರಾಗಿರದಿದ್ದರೆ, ಕ್ರಿಸ್ತನ ಮೇಲೆ ಆತುಕೊಳ್ಳುವ ಬದಲು ನಾವು ನಮ್ಮ ಕಾರ್ಯಕ್ರಮದ ಮೇಲೆ ಆತುಕೊಳ್ಳಬೇಕಾಗುತ್ತದೆ. [10]ಇದೂ ಸಹ ಗ್ರೀಕ್ ವಿವರಣೆಯನ್ನು ಒತ್ತಿ ಹೇಳುತ್ತದೆ.

[11]ಎರಡರ ಜೊತೆ ಎರಡು ಸೇರಿದಾಗ ಅದು ಸರಾಸರಿ ನಾಲ್ಕು ಆಗುತ್ತದೆ. ಇದೆಂದಿಗೂ ಐದು ಆಗದು. ಇದರಿಂದ ಸಂಕುಚಿತ ಮನೊಭಾವನೆಯ ಸತ್ಯವಾಗಿದೆ. [12]ಸಾರ್ವಜನಿಕ ಸಭೆಯಲ್ಲಿ ಶಿಷ್ಯರ ಎದೆಗಾರಿಕೆಯ ಲಕ್ಷಣವು ಆಗಿದೆ (9:27, 28; 13:46; 14:3; 18:26; 19:8; 26:26) ಇದು ಆದಿಸಭೆಯ ಬೆಳವಣಿಗೆಯ "ರಹಸ್ಯದ" ಸಂಗತಿಯಾಗಿತ್ತು. [13]ಔಪಚಾರಿಕ ಶಿಕ್ಷಣವು ಮೌಲ್ಯವುಳ್ಳದ್ದಾಗಿದೆ, ಆದರೆ ದೇವರ ವಾಕ್ಯದ ನಂಬಿಗಸ್ತರ ಸಾರೋಣವಿಕೆಗೆ ಪದವಿಗಳು ಪ್ರಮುಖವಲ್ಲದವುಗಳಾಗಿವೆ ಅಮೇರಿಕದತಲ್ಲಿ ಕ್ರೈಸ್ತ ಸಭೆಗಳು, ವಿಷೇಶವಾಗಿ ದಕ್ಷಿಣದಲ್ಲಿ ಔಪಚಾರಿಕೆ ತರಬೇತಿ ಇಲ್ಲದ, ದೇವರ ವಾಕ್ಯವನ್ನು ಸಾರಬೇಕೆನ್ನು ಬಿಬಲವಾದ ಆಸಕ್ತಿದಾಯಕ ರೈತರಿಂದ, ವ್ಯಾಪಾರಸ್ಥರಿಂದ ದೊಡ್ಡದಾಗಿ ಕಟ್ಟಲ್ಪಟ್ಟಿವೆ. [14]ಯೋಹಾನನು ಕಾಯಫನಿಗೆ ವೈಯಕ್ತಿಕವಾಗಿ ಪರಿಚಿತನಾಗಿದ್ದನು (ಯೋಹಾನ 18:15, 16). [15]ಮತ್ತಾಯ 21:23-27; 22:15-46ನ್ನು ಗಮನಿಸಿರಿ. ಹಿಂದೆ ಪೇತ್ರ ಮತ್ತು ಯೋಹಾನರು ನ್ಯಾಯಮಂಡಳಿಯ ಯೇಸುವನ್ನು ಹೇಗೆ ನೋಡಿಕೊಂಡಿತ್ತೆಂಬದನ್ನು ಮತ್ತೇ ಪುನ ನೋಡಿದರು. ಈಗ ನ್ಯಾಯ ಮಂಡಳಿಯು ಯೇಸುವು ಹೇಗೆ ಅವರೊಡನೆ ವ್ಯವಹರಿಸಿದ್ದನು ಎಂಬುದನ್ನು ತಿರುಗಿ ನೋಡಿತು. [16]ಈ ಪುಸ್ತಕದ ಮೊದಲಿಗೆ ಸಿಗುವ ಅಪೊಸ್ತಲರ ಕೃತ್ಯಗಳು 2:38ರಲ್ಲಿನ ಟಿಪ್ಪಣೆಯನ್ನು ಗಮನಿಸಿರಿ. [17]ಕಾವಲುಗಾರರು ನಿದ್ರೆಯಲ್ಲಿ ಮುಳುಗಿದ್ದರು ಮತ್ತು ಶಿಷ್ಯರು ದೇಹವನ್ನು ಕಳುವು ಮಾಡಿಕೊಂಡರು (ಮತ್ತಾಯ 28:11-15) ನ್ಯಾಯಸಭೆಯ ಈ ಹಾಸ್ಯಾಸ್ಪದ ಕಥೆಯನ್ನು ಪುನರಾವರ್ತನೆಮಾಡಲಿಲ್ಲ ಎಂಬುದು ಮಹತ್ವದ್ದಾಗಿದೆ. ಈ ಕಥೆಯು ಊಹೆಯಂತೆ ಕಾರ್ಯಮಾಡಿತ್ತು ನ್ಯಾಯಸಭೆಯ ನ್ಯಾಯಯುತ ಆಧಾರವಾಗಿ, ಪ್ರಸ್ತುತಪಡಿಸಿದ್ದು, ಪೇತ್ರನು "ಅವರನ್ನು ಅವರದೆ ಗಲ್ಲುಗಂಬಕ್ಕೆ ಹಾಕಿದರು" ಎಂಬಂತೆ (ಹೋಲಿಸಿ ಎಸ್ತೇರ 7:10) ಸೈನಿಕರು ತಮ್ಮ ಕಾರ್ಯದಲ್ಲಿರುವಾಗ ನಿಜವಾಗಿಯೂ ನಿದ್ರೆಹೋದದ್ದೆ ಆದರೆ ಮರಣಕ್ಕೆ ಒಪ್ಪಿಸಲ್ಪಡುತ್ತಿದ್ದರು, ಯಾವುದೇ ರೀತಿಯ ಬಹುಮಾನಕ್ಕೆ ಯೋಗ್ಯರಾಗುತ್ತಿರಲಿಲ್ಲ (ಹೋಲಿಸಿ 12:19; 16:27).